ನೇರಳೆ ಮಾರ್ಗದ ಮೆಟ್ರೊ ಸೇವೆಯಲ್ಲಿ ನಾಳೆ ತಾತ್ಕಾಲಿಕ ಸ್ಥಗಿತ

ಬೆಂಗಳೂರು, ಮೇ 29: ನೇರಳೆ ಮಾರ್ಗದಲ್ಲಿನ ದೀಪಾಂಜಲಿನಗರ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ(ಕೆಎಸ್‌ಆರ್) ಮೆಟ್ರೊ ನಿಲ್ದಾಣಗಳ ನಡುವೆ ಮೇ 31ರ ಬೆಳಗ್ಗೆ 7 ಗಂಟೆಯಿಂದ 9 ಗಂಟೆಯವರೆಗೆ ಮೆಟ್ರೊ ರೈಲು ಸಂಚಾರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ನೇರಳೆ ಮಾರ್ಗದಲ್ಲಿನ ಅತ್ತಿಗುಪ್ಪೆ ಮತ್ತು ವಿಜಯನಗರ ಮೆಟ್ರೊ ನಿಲ್ದಾಣಗಳ ನಡುವಿನ ಭಾಗದಲ್ಲಿ ಅಗತ್ಯ ನಿರ್ವಹಣಾ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದ್ದು, ಈ ಕಾಮಗಾರಿಗಳನ್ನು ಸುಗಮವಾಗಿ ನಿರ್ವಹಿಸುವ ಉದ್ದೇಶದಿಂದ ಸ್ಥಗಿತಗೊಳಿಸಲಾಗಿದೆ. ಆದರೆ ಈ ಅವಧಿಯಲ್ಲಿ ಮೆಟ್ರೊ ಸೇವೆಗಳು ಸಂಬಂಧಿತ ಟರ್ಮಿನಲ್ ನಿಲ್ದಾಣಗಳಿಂದ ಎಂದಿನಂತೆ ವೇಳಾಪಟ್ಟಿಯಂತೆ ಕಾರ್ಯನಿರ್ವಹಿಸಲಿವೆ.

ಸಂಪೂರ್ಣ ನೇರಳೆ ಮಾರ್ಗದಲ್ಲಿ, ದೀಪಾಂಜಲಿನಗರ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಮೆಟ್ರೊ ನಿಲ್ದಾಣಗಳ ನಡುವಿನ ಭಾಗವನ್ನು ಒಳಗೊಂಡಂತೆ, ಸಾಮಾನ್ಯ ಮೆಟ್ರೊ ಸೇವೆಗಳು ಬೆಳಿಗ್ಗೆ 9 ಗಂಟೆಯ ನಂತರ ಪುನರಾರಂಭವಾಗಲಿವೆ ಎಂದು ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತವು ಪ್ರಕಟಣೆಯಲ್ಲಿ ತಿಳಿಸಿದೆ.

ಬೆಂಗಳೂರಿನ ಕೆಲವು ಪ್ರದೇಶಗಳಲ್ಲಿ ನೀರು ಸರಬರಾಜು ವ್ಯತ್ಯಯ

ಬೆಂಗಳೂರು, ಮೇ 29: ಶನಿವಾರ ತುರ್ತು ದುರಸ್ತಿ ಕಾಮಗಾರಿ ಕೈಗೆತ್ತಿಕೊಂಡಿರುವ ಹಿನ್ನೆಲೆಯಲ್ಲಿ ಇಲ್ಲಿನ ಮೈಸೂರು ರಸ್ತೆ ಸೇವಾ ವ್ಯಾಪ್ತಿಯ ಹಲವು ಪ್ರದೇಶಗಳ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಬೆಂಗಳೂರು ಜಲಮಂಡಳಿ ಅಧ್ಯಕ್ಷರಾದ ಡಾ.ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಶುಕ್ರವಾರ ಪ್ರಕಟಣೆ ಹೊರಡಿಸಿರುವ ಅವರು, ಸೌತ್ ಎಂಡ್ ವೃತ್ತದ ಮುಖಾಂತರ ಮೈಸೂರು ರಸ್ತೆ ಸೇವಾ ಪ್ರದೇಶಗಳಿಗೆ ಪ್ರತಿನಿತ್ಯ 14 ನೀರು ಸರಬರಾಜು ಮಾಡುವ ಪೈಪ್‌ಲೈನ್ ರಸ್ತೆಯ ಮುಖ್ಯ ಕೊಳವೆಯಲ್ಲಿ ರಂಧ್ರ ಉಂಟಾಗಿ, ಹೆಚ್ಚಿನ ಒತ್ತಡದಲ್ಲಿ ನೀರು ಚಿಮ್ಮುತ್ತಿದೆ. ಇದರಿಂದ ಅಪಾರ ಪ್ರಮಾಣದ ಶುದ್ಧ ಕುಡಿಯುವ ನೀರು ಪೋಲಾಗುವುದರ ಜೊತೆಗೆ, ರಸ್ತೆಯಲ್ಲಿ ಸಂಚರಿಸುವ ದ್ವಿಚಕ್ರ ವಾಹನ ಸವಾರರು ಹಾಗೂ ಪಾದಚಾರಿಗಳಿಗೂ ತೀವ್ರ ತೊಂದರೆಯಾಗುತ್ತಿದೆ ಎಂದಿದ್ದಾರೆ.

ಸಾರ್ವಜನಿಕ ಹಿತದೃಷ್ಟಿ ಹಾಗೂ ಅಮೂಲ್ಯವಾದ ನೀರಿನ ಸದ್ಬಳಕೆಯ ಉದ್ದೇಶದಿಂದ ಸೌತ್ ಎಂಡ್ ರಸ್ತೆಯ ಸುರಾನ ಕಾಲೇಜು ಬಳಿ ಇರುವ 24 ಅಂಗುಲದ ಕವಾಟವನ್ನು 8 ಗಂಟೆಗಳ ಕಾಲ ಬಂದ್ ಮಾಡಿ ಸಮರೋಪಾದಿಯಲ್ಲಿ ಸೋರಿಕೆ ತಡೆಗಟ್ಟುವ ದುರಸ್ತಿ ಕಾಮಗಾರಿಯನ್ನು ನಡೆಸಲಾಗುವುದು ಎಂದು ತಿಳಿಸಿದ್ದಾರೆ.

ಈ ಕಾಲಾವಧಿಯಲ್ಲಿ ಮೈಸೂರು ರಸ್ತೆ ಸೇವಾಣೆಯ ವ್ಯಾಪ್ತಿಗೆ ಬರುವ ಕಸ್ತೂರಬಾ ನಗರ, ಬಾಪೂಜಿನಗರ, ಶಾಮಣ್ಣ ಗಾರ್ಡನ್, ಮಂಜುನಾಥನಗರ, ಹೊಸಗುಡ್ಡದಹಳ್ಳಿ, ಹಳೇಗುಡ್ಡದಹಳ್ಳಿ ಮತ್ತು ಅರಾಫತ್ ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ. ಕಾಮಗಾರಿ ಪೂರ್ಣಗೊಂಡ ತಕ್ಷಣವೇ ಈ ಎಲ್ಲ ಪ್ರದೇಶಗಳಿಗೆ ಎಂದಿನಂತೆ ಸುಗಮವಾಗಿ ನೀರು ಸರಬರಾಜು ಮಾಡಲಾಗುವುದು ಎಂದು ಅವರು ತಿಳಿಸಿದ್ದಾರೆ.

ಪದವಿ ಕಾಲೇಜುಗಳಲ್ಲಿ ಕೋರ್ಸ್‌ಗಳ ರದ್ದತಿಗೆ ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ ವಿರೋಧ

ಬೆಂಗಳೂರು, ಮೇ 29: ರಾಜ್ಯದ ಪದವಿ ಕಾಲೇಜುಗಳಲ್ಲಿನ 458 ವಿಷಯಗಳ ಕೋರ್ಸ್‌ಗಳನ್ನು ರದ್ದುಗೊಳಿಸುವ ಸರಕಾರದ ನಿರ್ಧಾರವು ಕೇವಲ ಸುಧಾರಣೆಯಲ್ಲ, ಬದಲಾಗಿ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ನಾಶಪಡಿಸುವ ಮತ್ತು ಉನ್ನತ ಶಿಕ್ಷಣದ ಸಂಪೂರ್ಣ ಖಾಸಗೀಕರಣಕ್ಕೆ ದಾರಿ ಮಾಡಿಕೊಡುವ ದುಷ್ಕೃತ್ಯವಾಗಿದೆ ಎಂದು ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯು ವಿರೋಧಿಸಿದೆ.

ಶುಕ್ರವಾರ ಸಮಿತಿಯ ಅಧ್ಯಕ್ಷ ಅಲ್ಲಮಪ್ರಭು ಬೆಟ್ಟದೂರು ಪ್ರಕಟಣೆ ಹೊರಡಿಸಿದ್ದು, ಮೂಲ ವಿಜ್ಞಾನ ಮತ್ತು ಮಾನವಿಕ ವಿಷಯಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಕಡಿಮೆಯಾಗಿದೆ ಎಂಬ ನೆಪವೊಡ್ಡಿ ರಾಜ್ಯ ಸರಕಾರ ಮತ್ತು ಉನ್ನತ ಶಿಕ್ಷಣ ಇಲಾಖೆಯು ಕೋರ್ಸ್‌ಗಳನ್ನು ಮುಚ್ಚುವ ವಿನಾಶಕಾರಿ ನಿರ್ಧಾರ ಕೈಗೊಂಡಿದೆ. ಈ ವಿಷಯಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಕಡಿಮೆಯಾಗಲು ನಿಜವಾದ ಕಾರಣ ವಿದ್ಯಾರ್ಥಿಗಳ ಆಸಕ್ತಿಯ ಕೊರತೆಯಲ್ಲ, ಬದಲಾಗಿ ಸರಕಾರದ ಅಪರಾಧಿ ನಿರ್ಲಕ್ಷ್ಯವೇ ಕಾರಣ ಎಂದಿದ್ದಾರೆ.

ಕಾಲೇಜುಗಳಲ್ಲಿ ಶೇ.75ಕ್ಕೂ ಹೆಚ್ಚು ಉಪನ್ಯಾಸಕರು ಅತಿಥಿ ಉಪನ್ಯಾಸಕರಾಗಿದ್ದಾರೆ. ಉನ್ನತ ಶಿಕ್ಷಣಕ್ಕೆ ಮೀಸಲಿಡುವ ಬಜೆಟ್ ಕುಸಿಯುತ್ತಿದೆ. ಕಾಲೇಜುಗಳಲ್ಲಿ ಮೂಲಸೌಕರ್ಯಗಳು ಕೊರತೆ ಗಂಭೀರವಾಗಿದೆ. ಈ ಮೂಲ ಸಮಸ್ಯೆಗಳನ್ನು ಪರಿಹರಿಸುವ ಬದಲು, ಹಲವು ಶೈಕ್ಷಣಿಕ ವಿಭಾಗಗಳನ್ನೇ ಕೈಬಿಡಲು ಮುಂದಾಗಿರುವುದು ವಿಷಾದನೀಯ ಎಂದು ಅವರು ಖಂಡಿಸಿದ್ದಾರೆ.

ಕೋರ್ಸ್‌ಗಳನ್ನು ಮುಚ್ಚುವ ಕ್ರಮವು ನೂರಾರು ಅತಿಥಿ ಉಪನ್ಯಾಸಕರನ್ನು ನಿರುದ್ಯೋಗಿಗಳನ್ನಾಗಿ ಮಾಡುವುದಲ್ಲದೆ, ಮೂಲ ವಿಜ್ಞಾನ ಮತ್ತು ಮಾನವಿಕ ವಿಷಯಗಳನ್ನು ಓದಿರುವ ಸಾವಿರಾರು ವಿದ್ಯಾರ್ಥಿಗಳ ಭವಿಷ್ಯವನ್ನು ಕತ್ತಲಲ್ಲಿ ತಳ್ಳುತ್ತದೆ ಎಂದು ಅಲ್ಲಮಪ್ರಭು ಬೆಟ್ಟದೂರು ಬೇಸರ ವ್ಯಕ್ತಪಡಿಸಿದ್ದಾರೆ. ದೇಶದ ಆರ್ಥಿಕತೆಯೇ ಕುಸಿತದಲ್ಲಿದ್ದು, ಉದ್ಯೋಗ ಸೃಷ್ಟಿಯಾಗದಿದ್ದಾಗ, ಕೇವಲ ಕೌಶಲ್ಯ ಆಧಾರಿತ ಕೋರ್ಸ್‌ಗಳನ್ನು ಹೇರುವುದು ಕ್ರೂರವಾದ ಅಣಕವಾಗಿದೆ. ಸಾರ್ವಜನಿಕ ಶಿಕ್ಷಣವನ್ನು ಖಾಸಗೀಕರಣಗೊಳಿಸಿ, ಶಿಕ್ಷಣ ಸಂಸ್ಥೆಗಳನ್ನು ಕೇವಲ 'ಕೌಶಲ್ಯದ ಪ್ರಮಾಣಪತ್ರಗಳನ್ನು ಮಾರುವ' ಕೇಂದ್ರಗಳಾಗಿ ಪರಿವರ್ತಿಸುವುದು ಹಾಗೂ ಯುವಜನರನ್ನು ವಿಮರ್ಶಾತ್ಮಕ ಚಿಂತನೆ ಮತ್ತು ಮಾನವೀಯ ಗುಣಗಳಿಂದ ದೂರವಿರಿಸುವುದು ರಾಜ್ಯ ಸರಕಾರದ ಉದ್ದೇಶವಾಗಿದೆ. ಹೀಗಾಗಿ ಈ ಕೂಡಲೇ ಈ ಶಿಕ್ಷಣ ವಿರೋಧಿ ಆದೇಶವನ್ನು ಹಿಂಪಡೆಯಬೇಕು ಎಂದು ಅವರು ಹೇಳಿದ್ದಾರೆ.

ಅರ್ಜಿ ಆಹ್ವಾನ

ಬೆಂಗಳೂರು, ಮೇ 29: ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಖಾಲಿ ಇರುವ 2 ವಾಹನ ಚಾಲಕರ ಹುದ್ದೆಗಳಿಗೆ ನೇರ ಭರ್ತಿಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಯಲ್ಲಿ ನಿಗದಿಪಡಿಸಿರುವ ಅಗತ್ಯ ಮತ್ತು ಇತರ ಅರ್ಹತಾ ಷರತ್ತುಗಳನ್ನು ಪೂರೈಸುವ ಅಭ್ಯರ್ಥಿಗಳು ಆಫ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಬಹುದು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಜೂ.25, ಖಾಲಿ ಹುದ್ದೆಗಳ ವರ್ಗೀಕರಣ, ವೇತನ ಶ್ರೇಣಿ, ನೇಮಕಾತಿ ವಿಧಾನ, ಸಂದರ್ಶನ, ಅರ್ಹತೆ, ವಯಸ್ಸಿನ ಮಿತಿ, ಅರ್ಜಿ ಶುಲ್ಕ, ಸೇವಾ ಪರಿವೀಕ್ಷಣಾ ಅವಧಿ, ಆಯ್ಕೆ ವಿಧಾನ, ಸಾಮಾನ್ಯ ಸೂಚನೆಗಳು, ಅರ್ಹತಾ ಮಾನದಂಡಗಳು, ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ವಿಧಾನ, ಮೀಸಲಾತಿ ಇತ್ಯಾದಿಗಳ ವಿವರಗಳಿಗಾಗಿ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ವೆಬ್‌ಸೈಟ್ https://karnataka.nalsa.gov.in ನೀಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಇಂದು ಕೃತಿ ಲೋಕಾರ್ಪಣೆ

ಬೆಂಗಳೂರು, ಮೇ 29: ವಿಕಾಸ್ ಆರ್. ಮೌರ್ಯ ಕನ್ನಡಕ್ಕೆ ಅನುವಾದಿಸಿರುವ ತೆಲುಗು ಸಾಹಿತಿ ಎಂಡ್ಲೂರಿ ಸುಧಾಕರ್ ಅವರು ಬರೆದಿರುವ ಅಪರೂಪದ ಕಥೆಗಳ 'ನುಡಿ ಚಮ್ಮಾಳಿಗೆ' ಕೃತಿಯ ಲೋಕಾರ್ಪಣೆ ಮೇ 30ರಂದು ಸಂಜೆ 5ಕ್ಕೆ ನಗರದ ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿವಿಯ ಸೆಮಿನಾರ್ ಹಾಲ್‌ನಲ್ಲಿ ಆಯೋಜಿಸಲಾಗಿದೆ. ಜೀರುಂಡೆ ಪುಸ್ತಕ ಹಾಗೂ ತಮಟೆ ಮೀಡಿಯಾದ ಸಹಯೋಗದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಬೆಂಗಳೂರು ನಗರ ವಿವಿಯ ಕುಲಪತಿ ಪ್ರೊ.ರಮೇಶ್ ಬಿ ಉದ್ಘಾಟಿಸಲಿದ್ದಾರೆ. ಹಿರಿಯ ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಕೃತಿ ಲೋಕಾರ್ಪಣೆಗೊಳಿಸಲಿದ್ದು, ಅಧ್ಯಕ್ಷತೆಯನ್ನು ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಡಾ.ಆರ್.ಸುನಂದಮ್ಮ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸಹಾಯಕ ಪ್ರಾಧ್ಯಾಪಕ ಕೀರ್ತಿಗೆ ಪಿಎಚ್‌ಡಿ

ಬೆಂಗಳೂರು, ಮೇ 29: ಕೋರಮಂಗಲದ ಸಂತ ಫ್ರಾನ್ಸಿಸ್ ಕಾಲೇಜು ಸಹಾಯಕ ಪ್ರಾಧ್ಯಾಪಕ ಕೀರ್ತಿ ಪಿ. ಅವರಿಗೆ ತುಮಕೂರು ವಿವಿಯು ಪಿಎಚ್‌ಡಿ ಪದವಿ ಪ್ರದಾನ ಮಾಡಿದೆ. ಕೀರ್ತಿ ಅವರು ಡಾ.ಡಿ.ವಿ.ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರದ ಪ್ರೊ.ಗೀತಾ ವಸಂತ ಅವರ ಮಾರ್ಗದರ್ಶನದಲ್ಲಿ 'ಕನ್ನಡ ಕಾವ್ಯ ಮೀಮಾಂಸೆ: ಬೇಂದ್ರೆ ಕಾಣ್ಕೆ' ಎನ್ನುವ ವಿಷಯದ ಕುರಿತು ಮಂಡಿಸಿದ ಮಹಾಪ್ರಬಂಧಕ್ಕೆ ಪಿಎಚ್‌ಡಿ ಲಭಿಸಿದೆ.

ನಗರಸಭಾ ಕಾರ್ಯಾಲಯ ನೆಲಮಂಗಲ

ಬೆಂಗಳೂರು ಗ್ರಾಮಾಂತರ ಜಿಲ್ಲೆ-562123. ದೂರವಾಣಿ : 080-27722735 ಸಹಾಯವಾಣಿ: 080-27723627
Web:www.nelamangalatown.mrc.gov.in Email :itstaffnelamangala@gmail.com

ನಂ. ನಸನೆ/ಆಶಾ/ಸಿ.ಆರ್/01/2026-27 ದಿನಾಂಕ: 27-05-2026

"ಪ್ರಕಟಣೆ"

ಭಾರತ ಸರ್ಕಾರ ಜಾರಿಗೊಳಿಸಿರುವ ಘನ ತ್ಯಾಜ್ಯ ನಿರ್ವಹಣಾ ನಿಯಮಗಳು-2026 (Solid Waste Management Rules, 2026) ರ ಅನ್ವಯ ಹಾಗೂ ನಗರ ವ್ಯಾಪ್ತಿಯಲ್ಲಿ ವೈಜ್ಞಾನಿಕ ಘನ ತ್ಯಾಜ್ಯ ನಿರ್ವಹಣೆಯನ್ನು ಬಲಪಡಿಸುವ ಉದ್ದೇಶದಿಂದ, ನೆಲಮಂಗಲ ನಗರಸಭಾ ವ್ಯಾಪ್ತಿಯಲ್ಲಿ **ಮೂಲದಲ್ಲಿಯೇ 4-ವಿಭಾಗ ಕಸದ ವಿಂಗಡಣೆಯನ್ನು** ತಕ್ಷಣದಿಂದ ದಿನಾಂಕ:-01.04.2026 ರಿಂದ ಕಡ್ಡಾಯವಾಗಿ ಜಾರಿಗೊಳಿಸಲಾಗುತ್ತದೆ ಎಂದು ತಿಳಿಸಲಾಗುತ್ತದೆ. ಎಲ್ಲಾ ಮನೆಗಳು, ವಾಣಿಜ್ಯ ಮಳಿಗೆಗಳು, ಸಂಸ್ಥೆಗಳು, ಮಾರುಕಟ್ಟೆಗಳು, ಬೃಹತ್ ತ್ಯಾಜ್ಯ ಉತ್ಪಾದಕರು, ಕಚೇರಿಗಳು, ಹೋಟೆಲ್‌ಗಳು, ಅಂಗಡಿಗಳು, ಬೀದಿ ವ್ಯಾಪಾರಿಗಳು, ಅಪಾರ್ಟ್‌ಮೆಂಟ್‌ಗಳು ಹಾಗೂ ಇತರೆ ತ್ಯಾಜ್ಯ ಉತ್ಪಾದಕರು ಕೆಳಕಂಡ ನಾಲ್ಕು ವಿಭಾಗಗಳಲ್ಲಿ ಕಸವನ್ನು ಕಡ್ಡಾಯವಾಗಿ ವಿಂಗಡಿಸಿ ನೆಲಮಂಗಲ ನಗರಸಭೆಯ ಕಸ ಸಂಗ್ರಹಣ ವಾಹನಗಳಿಗೆ ನೀಡಬೇಕು.

1. **2026 ರ ಘನತ್ಯಾಜ್ಯ ನಿರ್ವಹಣಾ ನಿಯಮಗಳ ಅತ್ಯಂತ ಪರಿವರ್ತನಾಶೀಲ ಅಂಶವೆಂದರೆ ಕಡ್ಡಾಯ ನಾಲ್ಕು-ಸ್ಟ್ರೀಮ್ ವಿಂಗಡಣೆ ವ್ಯವಸ್ಥೆ, ಎಲ್ಲಾ ತ್ಯಾಜ್ಯ ಉತ್ಪಾದಕರು ಈಗ ತಮ್ಮ ತ್ಯಾಜ್ಯವನ್ನು ನಾಲ್ಕು ವಿಭಿನ್ನ ವರ್ಗಗಳಾಗಿ ವಿಂಗಡಿಸಬೇಕು:**
   - **ಹಸಿ ತ್ಯಾಜ್ಯ(ಹಸಿರು ಡಬ್ಬಿ):** ಆಹಾರ ಅವಶೇಷಗಳು, ತರಕಾರಿ ಸಿಪ್ಪೆಗಳು, ಹಣ್ಣಿನ ತುಣುಕುಗಳು, ಹೂವುಗಳು ತೋಟಗಾರಿಕೆ, ಜೈವಿಕ ತ್ಯಾಜ್ಯ
   - **ಒಣ ತ್ಯಾಜ್ಯ(ನೀಲಿ ಡಬ್ಬಿ):** ಪ್ಲಾಸ್ಟಿಕ್, ಕಾಗದ, ಲೋಹ, ಗಾಜು, ರಬ್ಬರ್, ಮರುಬಳಕೆಯ ಯೋಗ್ಯ ತ್ಯಾಜ್ಯ.
   - **ಸ್ಯಾನಿಟರಿ ತ್ಯಾಜ್ಯ (ಕೆಂಪು ಡಬ್ಬಿ):** ಬಳಸಿದ ಡ್ರೈಪರ್‌ಗಳು, ಸ್ಯಾನಿಟರಿ ಪ್ಯಾಡ್‌ಗಳು, ಬ್ಯಾಂಡೇಜ್ ಹಾಗೂ ಇನ್ನಿತರೆ ಸ್ಯಾನಿಟರಿ ತ್ಯಾಜ್ಯ.
   - **ವಿಶೇಷ ತ್ಯಾಜ್ಯ /ಗ್ರಹ ಅಪಾಯಕಾರಿ / (ಕಪ್ಪು ಡಬ್ಬಿ):** ಬಣ್ಣದ ಡಬ್ಬಿಗಳು, ಬಲ್ಬ್‌ಗಳು, ಪಾದರಸದ ಥರ್ಮಾಮೀಟರ್‌ಗಳು, ಅವಧಿ ಮೀರಿದ ಔಷಧಿಗಳು, ಇ-ತ್ಯಾಜ್ಯ ಮತ್ತು ಇತರೆ ಅಪಾಯಕಾರಿ ಗೃಹೋಪಯೋಗಿ ವಸ್ತುಗಳು.

ಈ ವ್ಯವಸ್ಥಿತ ವಿಧಾನವು ತ್ಯಾಜ್ಯ ಉತ್ಪಾದನೆಯ ಹಂತದಿಂದಲೇ ಸರಿಯಾಗಿ ವಿಂಗಡಿಸಲ್ಪಡುವುದನ್ನು ಖಚಿತಪಡಿಸುತ್ತದೆ, ನಂತರದ ಸಂಸ್ಕರಣೆ ಮತ್ತು ಮರುಬಳಕೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಮತ್ತು ಪರಿಸರ ಸ್ನೇಹಿಯಾಗಿ ಮಾಡುತ್ತದೆ.

2. ಬೃಹತ್ ತ್ಯಾಜ್ಯ ಉತ್ಪಾದಕರಿಗೆ (BWG) ಸ್ಪಷ್ಟ ಜವಾಬ್ದಾರಿಗಳು

ಹೊಸ ಘನತ್ಯಾಜ್ಯ ನಿರ್ವಹಣಾ ನಿಯಮಗಳು ಬೃಹತ್ ತ್ಯಾಜ್ಯ ಉತ್ಪಾದಕರ ಸ್ಪಷ್ಟ ವ್ಯಾಖ್ಯಾನವನ್ನು ಒದಗಿಸುತ್ತವೆ ಮತ್ತು ಅವುಗಳ ನಿರ್ದಿಷ್ಟ ಜವಾಬ್ದಾರಿಗಳನ್ನು ವಿವರಿಸುತ್ತವೆ. ಬೃಹತ್ ತ್ಯಾಜ್ಯ ಉತ್ಪಾದಕ ಎಂದರೆ 20,000 ಚದರ ಮೀಟರ್ ಅಥವಾ ಅದಕ್ಕಿಂತ ಹೆಚ್ಚಿನ ನೆಲದ ವಿಸ್ತೀರ್ಣ/ದಿನಕ್ಕೆ 40,000 ಲೀಟರ್ ನೀರಿನ ಬಳಕೆ ಅಥವಾ ದಿನಕ್ಕೆ 100 ಕೆಜಿ ತ್ಯಾಜ್ಯ ಉತ್ಪಾದನೆಯನ್ನು ಹೊಂದಿರುವ BWG ಗಳು ಎಂದು ವರ್ಗೀಕರಿಸಲಾಗಿದೆ. ಈ ವರ್ಗವು ಸರ್ಕಾರಿ ಇಲಾಖೆಗಳು, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ವಲಯದ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ವಾಣಿಜ್ಯ ಸಂಸ್ಥೆಗಳು, ವಸತಿ ಸಂಘಗಳು, ಹೋಟೆಲ್‌ಗಳು, ಆಸ್ಪತ್ರೆಗಳು, ಮಾರುಕಟ್ಟೆಗಳು, ಕ್ರೀಡಾಂಗಣಗಳು ಮತ್ತು ಇತರೆ ಸಂಸ್ಥೆಗಳನ್ನು ಒಳಗೊಂಡಿದೆ.

ವಿಸ್ತೃತ ಬೃಹತ್ ತ್ಯಾಜ್ಯ ಉತ್ಪಾದಕರ ಜವಾಬ್ದಾರಿ (EBWGR)

ವಿಸ್ತೃತ ಬೃಹತ್ ತ್ಯಾಜ್ಯ ಉತ್ಪಾದಕ ಜವಾಬ್ದಾರಿ (EBWGR) ಪರಿಚಯವು ಒಂದು ಹೊಸ ವೈಶಿಷ್ಟ್ಯವಾಗಿದೆ. ಈ ಚೌಕಟ್ಟಿನ ಅಡಿಯಲ್ಲಿ, ಬೃಹತ್ ತ್ಯಾಜ್ಯ ಉತ್ಪಾದಕರು ತಾವು ಉತ್ಪಾದಿಸುವ ತ್ಯಾಜ್ಯಕ್ಕೆ ಜವಾಬ್ದಾರರಾಗಿರುತ್ತಾರೆ. ಅವರು ಹೀಗೆ ಮಾಡಬೇಕು:

- ಸಾಧ್ಯವಾದಲ್ಲೆಲ್ಲಾ ಹಸಿ ತ್ಯಾಜ್ಯವನ್ನು ಸ್ಥಳದಲ್ಲೇ ಸಂಸ್ಕರಿಸಿ.
- ಆನ್-ಸೈಟ್ ಪ್ರಕ್ರಿಯೆ ಸಾಧ್ಯವಾಗದಿದ್ದರೆ EBWGR ಪ್ರಮಾಣಪತ್ರವನ್ನು ಪಡೆದುಕೊಳ್ಳಿ.
- ಪರಿಸರ ಸ್ನೇಹಿ ಸಂಗ್ರಹಣೆ, ಸಾಗಣೆ ಮತ್ತು ಎಲ್ಲಾ ಉತ್ಪತ್ತಿಯಾಗುವ ತ್ಯಾಜ್ಯಗಳ ಸಂಸ್ಕರಣೆಯನ್ನು ಖಚಿತಪಡಿಸಿಕೊಳ್ಳುವುದು,

ಒಟ್ಟು ಘನತಾಜ್ಯ ಉತ್ಪಾದನೆಯಲ್ಲಿ ಬೃಹತ್ ತ್ಯಾಜ್ಯ ಉತ್ಪಾದಕರು ಸುಮಾರು 30% ರಷ್ಟಿರುವುದರಿಂದ, ಈ ನಿಬಂಧನೆಯು ನಗರ ಸ್ಥಳೀಯ ಸಂಸ್ಥೆಗಳ ಮೇಲಿನ ಹೊರೆಯನ್ನು ಗಮನಾರ್ಹವಾಗಿ ಕಡಿಮೆ ಮಾಡುತ್ತದೆ ಮತ್ತು ವಿಕೇಂದ್ರೀಕೃತ ತ್ಯಾಜ್ಯ ನಿರ್ವಹಣೆಯನ್ನು ಉತ್ತೇಜಿಸುತ್ತದೆ ಎಂದು ನಿರೀಕ್ಷಿಸಲಾಗಿದೆ.

ಸೂಚನೆಗಳು:

1. ಎಲ್ಲಾ ತಾಜ್ಯ ಉತ್ಪಾದಕರು ವಿಂಗಡಿಸಿದ ತ್ಯಾಜ್ಯವನ್ನು ಮಾತ್ರ ನಗರಸಭೆಯ ಮನೆ ಮನೆ ಸಂಗ್ರಹಣ ವಾಹನಕ್ಕೆ ನೀಡಬೇಕು.
2. ವಿಂಗಡಿಸಿದ ತ್ಯಾಜ್ಯವನ್ನು ಮಿಶ್ರಣ ಮಾಡುವುದು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.
3. ಬ್ರಹತ್ ತ್ಯಾಜ್ಯ ಉತ್ಪಾದಕರು ಎಸ್‌ಡಬ್ಲ್ಯೂ.ಎಂ. ನಿಯಮಗಳು, 2026ರ ಅನ್ವಯ ಸ್ಥಳದಲ್ಲಿಯೇ ತ್ಯಾಜ್ಯ ಸಂಸ್ಕರಣೆ ವ್ಯವಸ್ಥೆ ಕೈಗೊಳ್ಳಬೇಕು.
4. ಎಲ್ಲಾ ವಾಣಿಜ್ಯ ಸಂಸ್ಥೆಗಳು ಹಾಗೂ ಕಚೇರಿಗಳು ನಾಲ್ಕು ವಿಭಾಗಗಳ ಪ್ರತ್ಯೇಕ ಡಬ್ಬಿಗಳನ್ನು ಕಡ್ಡಾಯವಾಗಿ ವ್ಯವಸ್ಥೆ ಮಾಡಬೇಕು.
5. ಸ್ವಚ್ಚತಾ ಸಿಬ್ಬಂದಿ ಹಾಗೂ ವಾಹನ ಚಾಲಕರು ವಿಂಗಡಿತ ತ್ಯಾಜ್ಯವನ್ನು ಪ್ರತ್ಯೇಕವಾಗಿ ಸಂಗ್ರಹಿಸಿ ಸಾಗಿಸಬೇಕು.

ದಂಡಾತ್ಮಕ ಕ್ರಮಗಳು

ಈ ಅಧಿಸೂಚನೆಯ ನಿಯಮಗಳನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿ, ಮನೆ, ಸಂಸ್ಥೆ ಅಥವಾ ವಾಣಿಜ್ಯ ಘಟಕಗಳ ವಿರುದ್ಧ ಎಸ್‌ಡಬ್ಲ್ಯೂಎಂ ನಿಯಮಗಳು, 2026, ಪುರಸಭೆ ಉಪನಿಯಮಗಳು ಹಾಗೂ ಸರ್ಕಾರದ ಆದೇಶಗಳ ಅನ್ವಯ ದಂಡ / ಸ್ಪಾಟ್ ಫೈನ್ / ಕಾನೂನು ಕ್ರಮ ಕೈಗೊಳ್ಳಲಾಗುವುದು.

ಸಹಿ/- ಅಧ್ಯಕ್ಷರು, ನಗರಸಭೆ, ನೆಲಮಂಗಲ,
ಸಹಿ/- ಪೌರಾಯುಕ್ತರು, ನಗರಸಭೆ, ನೆಲಮಂಗಲ,

DIPR/CP/VCPL/894/2026-27

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ. ಎಂ.ಹೆಚ್. ಮರಿಗೌಡ ರಸ್ತೆ ಬೆಂಗಳೂರು-560 029
ಫೋನ್: 25536567/26096832/910/922 ಫ್ಯಾಕ್ಸ್: 080-25536105
E-mail: purchase@kmf.coop

ಸಂ. ಕಹಾಮ/ಖರೀದಿ/NPFP/ಇ-ಪ್ರೊಕ್./ಟೆಂಡರ್-927/2026 ದಿನಾಂಕ: 27.05.2026

ಟೆಂಡರ್ ಪ್ರಕಟಣೆ

ಕರ್ನಾಟಕ ಹಾಲು ಮಹಾ ಮಂಡಳಿ ಬೆಂಗಳೂರು ಈ ಕೆಳಗೆ ತಿಳಿಸಿದ ಕಚ್ಚಾಮಾಲನ್ನು ಸಾಗಾಣಿಕೆ ಮಾಡುವ ಸಂಬಂಧ ದ್ವೈವಾರ್ಷಿಕ ಅವಧಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

Sl. No.	Item Description	Unit	Approximate qty For the period of Two Years	EMD Amount (Rs.)
1	Transportation of Granules from in and around Bangalore to Nandini Packaging Film Plant (10MTs Vehicle)	10MTs	720	1,42,000/-

ಇ-ಪ್ರೊಕ್ಯೂರ್‌ಮೆಂಟ್ https://kppp.karnataka.gov.in ಮೂಲಕ ಟೆಂಡರ್ ಅನ್ನು **ದಿನಾಂಕ 18.06.2026 ರಂದು 03.00 ಗಂಟೆಯ ಒಳಗೆ ಸಲ್ಲಿಸಬಹುದಾಗಿದೆ.**
ಇನ್ನಿತರ ವಿವರಗಳನ್ನು ಟೆಂಡರ್‌ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

ಕೇಂದ್ರ ರೈಲ್ವೆ
ಸೋಲಾಪುರ ವಿಭಾಗ
"ವಿವಿಧ ಇಂಜಿನಿಯರಿಂಗ್ ಕಾಮಗಾರಿಗಳು"

ಭಾರತದ ರಾಷ್ಟ್ರಪತಿಗಳ ಪರವಾಗಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕರು (ಕಾಮಗಾರಿ), ಮಧ್ಯ ರೈಲ್ವೆ, ಸೋಲಾಪುರ ಇವರು ಈ ಕೆಳಗಿನ ಕಾಮಗಾರಿಗಳಿಗಾಗಿ ಪ್ರತಿಷ್ಠಿತ ಸಂಸ್ಥೆಗಳು/ ಗುತ್ತಿಗೆದಾರರಿಂದ ಇ-ಟೆಂಡರ್ ಆಹ್ವಾನಿಸಿದ್ದಾರೆ; ಟೆಂಡರ್ ನೋಟಿಸ್ ಸಂಖ್ಯೆ: 09-2026-SrDENC, ಕಾಮಗಾರಿಯ ಹೆಸರು: ಸೋಲಾಪುರ ವಿಭಾಗದಲ್ಲಿ ಎಡಿಇಎನ್/ಕುರ್ದುವಾಡಿ ಬಿಜಿ ಉಪವಿಭಾಗದ ವ್ಯಾಪ್ತಿಯ SSE/P.Way/JH ವಿಭಾಗದಲ್ಲಿ ಹಾಗೂ ಎಡಿಇಎನ್/ಸೋಲಾಪುರ ಉತ್ತರ ವ್ಯಾಪ್ತಿಯ ಎಸ್‌ಎಸ್‌ಇ/ಪಿ.ವೇ/ಕುರ್ದುವಾಡಿ ದಕ್ಷಿಣ ಮತ್ತು ಎಸ್‌ಎಸ್‌ಇ/ಪಿ.ವೇ/ಸೋಲಾಪುರ ಉತ್ತರ ವಿಭಾಗಗಳಲ್ಲಿ RCC ಸೈಡ್ ಡ್ರೈನ್ ವ್ಯವಸ್ಥೆ ಕಲ್ಪಿಸುವುದು; ಕಾಮಗಾರಿ ಯ ಅಂದಾಜು ವೆಚ್ಚ: ರೂ. 5,04,16,013.13, ಇಎಂಡಿ: ರೂ. 10,08,300.00, ಕಾಮಗಾರಿ ಪೂರ್ಣಗೊಳಿಸುವ ಅವಧಿ: 12 ತಿಂಗಳುಗಳು, ನಿರ್ವಹಣಾ ಅವಧಿ: 12 ತಿಂಗಳುಗಳು; ಟೆಂಡರ್ ನೋಟಿಸ್ ಸಂಖ್ಯೆ: 10-2026-SrDENC, ಕಾಮಗಾರಿಯ ಹೆಸರು: ಎಡಿಇಎನ್/ಬಿಜಿ/ಕುರ್ದುವಾಡಿ ಉಪವಿಭಾಗದ ವ್ಯಾಪ್ತಿಯ ರೈಲ್ವೆ ಕಾಲೋನಿ ಗಳಲ್ಲಿ ಅಪ್ರೋಚ್ ರಸ್ತೆ (ಸಂಪರ್ಕ ರಸ್ತೆ) ನಿರ್ಮಾಣ; ಕಾಮಗಾರಿಯ ಅಂದಾಜು ವೆಚ್ಚ: ರೂ. 3,47,59,562.81, ಇಎಂಡಿ: ರೂ. 6,95,200/-, ಕಾಮಗಾರಿ ಪೂರ್ಣಗೊಳಿ ಸುವ ಅವಧಿ: 06 ತಿಂಗಳುಗಳು, ನಿರ್ವ ಹಣಾ ಅವಧಿ: 12 ತಿಂಗಳುಗಳು; ಟೆಂಡರ್ ನೋಟಿಸ್ ಸಂಖ್ಯೆ: 11-2026-SrDENC, ಕಾಮಗಾರಿಯ ಹೆಸರು: ದೌಂಡ್ (ಹೊರತುಪಡಿಸಿ)-ಕುರ್ದುವಾಡಿ ವಿಭಾಗದ ಕೆಂಡ್ಗಾ (SEI), ಬಾರ್ಶಿ ಟೌನ್ (BTW) ಮತ್ತು ಮಲಿಕ್ ಪೇಟೆ (MLB) ನಿಲ್ದಾಣಗಳಲ್ಲಿ ಆರ್‌ಪಿಎಫ್ (RPF) ಸಿಬ್ಬಂದಿ ಗಾಗಿ ಸಿಗ್ನಲ್ ಗೂಮಟಿಗಳ ದುರಸ್ತಿ ಮತ್ತು ನವೀಕರಣ; ಕಾಮಗಾರಿಯ ಅಂದಾಜು ವೆಚ್ಚ: ರೂ. 75,18,586.83, ಇಎಂಡಿ: ರೂ. 1,50,400.00, ಕಾಮಗಾರಿ ಪೂರ್ಣಗೊಳಿ ಸುವ ಅವಧಿ: 06 ತಿಂಗಳು ಗಳು, ನಿರ್ವಹಣಾ ಅವಧಿ: 12 ತಿಂಗಳುಗಳು; ಟೆಂಡರ್ ನೋಟಿಸ್ ಸಂಖ್ಯೆ: 12-2026-SrDENC, ಕಾಮಗಾರಿಯ ಹೆಸರು: ಎಡಿಇಎನ್ (ಬಿಜಿ) ಕುರ್ದುವಾಡಿ ಅಡಿಯಲ್ಲಿ ಜೇವುರ್ (JEUR) ನಲ್ಲಿ ಯುಜಿ (UG) ಟ್ಯಾಂಕ್, ನೀರಿನ ಪೈಪ್ ಲೈನ್, ಪಂಪ್ ಹೌಸ್ ಮತ್ತು ತ್ಯಾಜ್ಯ ನೀರು ಹರಿವಿನ ವ್ಯವಸ್ಥೆಯೊಂದಿಗೆ ಒಳಚರಂಡಿ ಸಂಸ್ಕರಣಾ ಘಟಕ (15 KLD Sewage Treatment Plant) ನಿರ್ಮಾಣ; ಕಾಮಗಾರಿಯ ಅಂದಾಜು ವೆಚ್ಚ: ರೂ. 65,12,594.26, ಇಎಂಡಿ: ರೂ. 1,30,300.00, ಕಾಮಗಾರಿ ಪೂರ್ಣಗೊಳಿ ಸುವ ಅವಧಿ: 12 ತಿಂಗಳುಗಳು, ನಿರ್ವಹಣಾ ಅವಧಿ: 12 ತಿಂಗಳುಗಳು; www.ireps.gov.in ವೆಬ್‌ಸೈಟ್ ನಲ್ಲಿ ಟೆಂಡರ್ ದರಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: 18/06/2026 ರಂದು ಮಧ್ಯಾಹ್ನ 15:00 ಗಂಟೆಯವರೆಗೆ, www.ireps.gov.in ನಲ್ಲಿ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: 18/06/2026 ರಂದು ಮಧ್ಯಾಹ್ನ 15:00 ಗಂಟೆಗೆ; ಸಂಭಾವ್ಯ ಟೆಂಡರ್‌ದಾರರು ಈ ಟೆಂಡರ್‌ಗೆ ಸಂಬಂಧಿಸಿದ ಯಾವುದೇ ಬದಲಾವಣೆಗಳು/ ತಿದ್ದುಪಡಿ ಗಳನ್ನು ಗಮನಿಸಲು ಟೆಂಡರ್ ಮುಕ್ತಾಯದ ದಿನಾಂಕದ ಮೊದಲು ಆಗಾಗ್ಗೆ ವೆಬ್‌ಸೈಟ್‌ಗೆ ಭೇಟಿ ನೀಡಲು ಸೂಚಿಸಲಾಗಿದೆ. ಡಿಆರ್‌ಎಂ (ಕಾಮಗಾರಿ), ಸೋಲಾಪುರ

ಅಪಾಯಕಾರಿ ಮತ್ತು ಸ್ಫೋಟಕ ವಸ್ತುಗಳೊಂದಿಗೆ ಪ್ರಯಾಣಿಸುವುದು ಶಿಕ್ಷಾರ್ಹ ಅಪರಾಧವಾಗಿದೆ.

ಕರ್ನಾಟಕ ಸರಕಾರ ಆರೋಗ್ಯ ಇಲಾಖೆ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಛೇರಿ, ಉಡುಪಿ ಜಿಲ್ಲೆ, ಅಜ್ಜರಕಾಡು, ಉಡುಪಿ-576101.

e-mail: dhoudupi-hfws@karnataka.gov.in Ph No: 0820-2525566/2536650
No: DHO/UDUPI/48/2026-27 Date: 25-05-2026

ಇ-ಟೆಂಡರ್ ಪ್ರಕಟಣೆ

ಉಡುಪಿ ಜಿಲ್ಲೆಯ ರಾಷ್ಟ್ರೀಯ ಆರೋಗ್ಯ ಅಭಿಯಾನದ, 15ನೇ ಹಣಕಾಸು ಆಯೋಗದ, PM-ABHIM ಕಾರ್ಯಕ್ರಮಗಳ ಅನುದಾನ ಮತ್ತು ಜಿಲ್ಲಾ ಪಂಚಾಯತ್ ಅನುದಾನದಡಿ ಜಿಲ್ಲಾ ಆರೋಗ್ಯ ಮತ್ತು ಕು.ಕ ಕಛೇರಿ, ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳ ಕಛೇರಿಗೆ, ವಿವಿಧ ಆಸ್ಪತ್ರೆಗಳಿಗೆ ಅಗತ್ಯವಿರುವ ಲೇಖನ ಸಾಮಾಗ್ರಿ, ಕ್ಯಾಟ್ರಿಡ್ಜ್, ಬಳಕೆ ಸಾಮಾಗ್ರಿ ಮತ್ತು ಸ್ವಚ್ಛತಾ ಸಾಮಾಗ್ರಿಗಳನ್ನು ಅವಶ್ಯಕತೆಗಳಿಗನುಸಾರವಾಗಿ 1 ವರ್ಷದ ಅವಧಿಯವರೆಗೆ ಪೂರೈಸಲು ಅರ್ಹ ಸಂಸ್ಥೆಗಳಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಎರಡು ಟೆಂಡರ್ ಡಾಕ್ಯೂಮೆಂಟ್ ಸಿಸ್ಟಂನಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಉಚಿತ ಟೆಂಡರ್ ನಮೂನೆಗಳಿಗಾಗಿ, ಇ.ಎಂ.ಡಿ ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳಿಗಾಗಿ ವೆಬ್‌ಸೈಟ್ https://kppp.karnataka.gov.in ನಲ್ಲಿ ನೋಡಬಹುದಾಗಿದೆ. ಅಂದಾಜು ವೆಚ್ಚ: ರೂ. 60,00,000/-, ಇ.ಎಂ.ಡಿ: ರೂ. 1,20,000/-

(1) ಆಕ್ಷೇಪಣೆಗಳಿಗೆ ಅಂತಿಮ ದಿನಾಂಕ: 29/05/2026ರ ಸಂಜೆ 04-00 ಘಂಟೆಯವರೆಗೆ (2) ಎಲ್ಲಾ ಸಾಮಾಗ್ರಿಗಳ ಮಾದರಿ ಪರಿಶೀಲನೆಗೆ ಅಂತಿಮ ದಿನಾಂಕ: 30/05/2026ರ ಸಂಜೆ 4-00 ಘಂಟೆಯವರೆಗೆ (3) ಟೆಂಡರ್ ಅರ್ಜಿ ಹಾಕಲು ಅಂತಿಮ ದಿನಾಂಕ: 09/06/2026ರ ಪೂರ್ವಾಹ್ನ 11.00 ಘಂಟೆಯವರೆಗೆ (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 11/06/2026 ಪೂರ್ವಾಹ್ನ 11.30 ಘಂಟೆಯ ನಂತರ

ಸಹಿ/- (ಡಾ ಬಸವರಾಜ ಜಿ ಹುಬ್ಬಳ್ಳಿ)
ಜಿಲ್ಲಾ ಆರೋಗ್ಯ ಮತ್ತು .ಕು.ಕ ಅಧಿಕಾರಿಗಳು, ಉಡುಪಿ ಜಿಲ್ಲೆ.

ವಾಸಾಇ/ಸನಿಉ/ಕೆಎಸ್‌ಎಂಸಿಎ/127/26-27 ದಿ: 27.05.2026

ನಗರಸಭಾ ಕಾರ್ಯಾಲಯ, ನಂಜನಗೂಡು

ಮೈಸೂರು ಜಿಲ್ಲೆ, ಮೈಸೂರು. ದೂರವಾಣಿ: 08221-226236
ಇ-ಮೇಲ್: itstaff_ulb_nanjangud@yahoo.co.in ವೆಬ್‌ಸೈಟ್ : www.nanjanaguducity.mrc.gov.in

ಸಂ.: ನಸಕಾ/ಆ.ಶಾ/ಹೊ.ಗು.ಟೆಂಡರ್/ಪಿ.ಆರ್.-01/2026-27 ದಿನಾಂಕ: 26.05.2026

ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ)

ನಂಜನಗೂಡು ನಗರಸಭೆಯ ಆರೋಗ್ಯ ವಿಭಾಗಕ್ಕೆ ಅಗತ್ಯವಿರುವ ನೌಕರರನ್ನು ಹೊರಗುತ್ತಿಗೆ ಆಧಾರದ ಮೇಲೆ ನಿಯೋಜಿಸಿಕೊಳ್ಳಲು ಹಾಗೂ ಇತರೆ ಸೇವೆಗಳನ್ನು ನೋಂದಾಯಿತ ಅರ್ಹ ಸೇವಾ ಒದಗಣೆದಾರರು ಮತ್ತು ಮಾನವ ಸಂಪನ್ಮೂಲ ಸಂಸ್ಥೆ/ಸರಬರಾಜುದಾರರಿಂದ 1999 ಹಾಗೂ 2000ರ ಕೆಟಿಪಿಪಿ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಈ ಕೆಳಕಂಡ ಸೇವೆಗಳಿಗಾಗಿ ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಟೆಂಡರ್‌ದಾರರು http://kppp.karnataka.gov.in ನಿಂದ ಟೆಂಡರ್ ಷರತ್ತಿಗೊಳಪಟ್ಟು ಹಾಗೂ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆ.

1. ಆನ್‌ಲೈನ್‌ನಲ್ಲಿ ಟೆಂಡರ್ ದಸ್ತಾವೇಜು ದೊರೆಯುವ **ದಿನಾಂಕ: 26.05.2026 ರಿಂದ. 2.** ಟೆಂಡರ್‌ನ್ನು ಸಲ್ಲಿಸಲು ಕಡೆಯ ದಿನಾಂಕ: **10.06.2026 ಸಂಜೆ 5.00 ಗಂಟೆಯವರೆಗೆ. 3.** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 12.06.2026ರಂದು ಬೆಳಗ್ಗೆ 11.00 ಗಂಟೆಗೆ.**

ಕ್ರ ಸಂ.	Tender Name	Tender Number	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)
1	Supply of Computer Data Entry Operators on Outsource basis to CMC Nanjangud, Mysuru District.	DMA/2026-27/SE7738/Call-2	9.33	23325
2	Supply of workers for MRF Plant drivers and loaders for autotippers on outsource basis to CMC Nanjangud.	DMA/2026-27/SE7672/Call-2	46.34	108860
3	Supply of workers for conducting ABC Program in CMC Nanjangud.	DMA/2026-27/SE7674/Call-2	16.27	40685

ಸೂಚನೆ:- ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಗುತ್ತಿಗೆದಾರರು **https://kppp.karnataka.gov.in** ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/- ಪೌರಾಯುಕ್ತರು, ನಗರಸಭೆ, ನಂಜನಗೂಡು

DIPR/MYS/242/SA/2026-27

ಓಟಿಸಿಓ ಇಂಟರ್‌ನ್ಯಾಷನಲ್ ಲಿಮಿಟೆಡ್

ಕಾರ್ಪೊರೇಟ್ ಐಡೆಂಟಿಟಿ ನಂಬರ್ : L17114KA2001PLC028611
ನೋಂದಾಯಿತ ಕಚೇರಿ: ಪಿ-41, 9ಎ ಮುಖ್ಯ, ಎಲ್‌ಐಸಿ ಕಾಲೋನಿ, ಜೀವನ್‌ಭೀಮ ನಗರ, ಎಚ್‌ಎಎಲ್ 3ನೇ ಹಂತ, ಹೊಸ ತಿಪ್ಪಸಂದ್ರ, ಬೆಂಗಳೂರು, ಕರ್ನಾಟಕ- 560075. ದೂ: 080-25296825 / 9789053807
ಇ-ಮೇಲ್: info@otco.in | ವೆಬ್‌ಸೈಟ್ www.otco.in

31.03.2026ಕ್ಕೆ ಕೊನೆಗೊಂಡ ತ್ರೈಮಾಸಿಕದ ಮತ್ತು ವರ್ಷದ ಪರಿಶೋಧಿತ ಫಲಿತಾಂಶದ ಸ್ವತಂತ್ರ ಹೇಳಿಕೆ

ಇಪಿಎಸ್ ಹೊರತುಪಡಿಸಿ ಮೊತ್ತ ₹ ಲಕ್ಷ ರೂಪಾಯಿಗಳಲ್ಲಿ

ವಿವರಗಳು	31.03.2026 ಕ್ಕೆ ಕೊನೆಗೊಂಡ ತ್ರೈಮಾಸಿಕ (ಪರಿಶೋಧಿತ)	31.03.2025 ಕ್ಕೆ ಕೊನೆಗೊಂಡ ತ್ರೈಮಾಸಿಕ (ಪರಿಶೋಧಿತ)	31.12.2025 ಕ್ಕೆ ಕೊನೆಗೊಂಡ ತ್ರೈಮಾಸಿಕ (ಪರಿಶೋಧಿತವಲ್ಲದ)	31.03.2026 ಕ್ಕೆ ಕೊನೆಗೊಂಡ ವರ್ಷದಲ್ಲಿ (ಪರಿಶೋಧಿತ)	31.03.2025 ಕ್ಕೆ ಕೊನೆಗೊಂಡ ವರ್ಷದಲ್ಲಿ (ಪರಿಶೋಧಿತ)
1) ಕಾರ್ಯಾಚರಣೆಯಿಂದ ಆದಾಯ	-	9.03	-	-	90.20
2) ಇತರ ಆದಾಯ	16.43	0.25	-	22.13	0.90
3) ಒಟ್ಟು ಆದಾಯ	**16.43**	**9.28**	-	**22.13**	**91.10**
4) ವೆಚ್ಚ					
ಎ. ವ್ಯಾಪಾರ ದಾಸ್ತಾನು ಖರೀದಿ & ಸಂಬಂಧಿತ ವೆಚ್ಚಗಳು	0.95	0.26	5.17	0.95	47.21
ಬಿ. ಉತ್ಪಾದಿತ ಸರಕುಗಳ ಇನ್ವೆಂಟರಿ, ಡಬ್ಲ್ಯುಐಪಿ & ವ್ಯಾಪಾರ ದಾಸ್ತಾನು ಬದಲಾವಣೆ	-	-	-	-	-
ಸಿ. ಸೇವಾ ವೆಚ್ಚಗಳು	-	-	-	-	-
ಡಿ. ಉದ್ಯೋಗಿ ಪ್ರಯೋಜನ ವೆಚ್ಚ	1.05	3.35	4.17	4.97	17.17
ಇ. ಹಣಕಾಸು ವೆಚ್ಚಗಳು	-	-	-	0.51	0.05
ಎಫ್. ಸವಕಳಿ & ಭೋಗ್ಯ ವೆಚ್ಚ	2.87	4.86	-	2.87	4.86
ಜಿ. ಇತರೆ ವೆಚ್ಚಗಳು	1.37	1.23	3.13	10.31	18.31
ಒಟ್ಟು ವೆಚ್ಚಗಳು	**6.23**	**9.69**	**12.47**	**19.60**	**87.60**
5) ವಿಶೇಷ ಅಂಶಗಳು ಮತ್ತು ತೆರಿಗೆ (3-4)ಗೆ ಮುನ್ನ ಲಾಭ/ (ನಷ್ಟ)	10.20	(0.41)	(12.47)	2.52	3.50
6) ವಿಶೇಷ ಅಂಶಗಳು	-	-	-	-	-
7) ತೆರಿಗೆಗೆ ಮುನ್ನ ಲಾಭ/ (ನಷ್ಟ)	10.20	(0.41)	(12.47)	2.52	3.50
8) ತೆರಿಗೆ ವೆಚ್ಚ					
ಪ್ರಸ್ತುತ ತೆರಿಗೆ	-	0.55	-	-	0.55
ಎಂಎಟಿ ಕ್ರೆಡಿಟ್ ಅರ್ಹತೆ	-	-	-	-	-
ಮುಂದೂಡಲ್ಪಟ್ಟ ತೆರಿಗೆ	-	-	-	-	-
9) ತೆರಿಗೆ ಬಳಿಕ ನಿವ್ವಳ ಲಾಭ/ (ನಷ್ಟ) (7-8)	10.20	(0.96)	(12.47)	2.52	2.95
10) ಈಕ್ವಿಟಿ ಸಾಧನಗಳ ಲಾಭ ಅಥವಾ ನಷ್ಟ ಮರುಪಾವತಿಗೆ ಮರು ವರ್ಗೀಕರಣಗೊಳ್ಳದ ಇತರ ಸಮಗ್ರ ಆದಾಯ (ತೆರಿಗೆಯ ನಿವ್ವಳ) ಅಂಶಗಳು	-	-	-	-	-
11) ಈ ಅವಧಿಗೆ ಒಟ್ಟು ಸಮಗ್ರ ಆದಾಯ (9+10)	10.20	(0.96)	(12.47)	2.52	2.95
12) ಪೇಯ್ಡ್ ಅಪ್ ಈಕ್ವಿಟಿ ಷೇರು ಬಂಡವಾಳ (ಮುಖಬೆಲೆ ಪ್ರತಿ ಷೇರಿಗೆ ₹2)	259.36	259.36	259.36	259.36	259.36
13) ಇತರ ಈಕ್ವಿಟಿ					
14) ಪ್ರತಿ ಷೇರಿನ ಗಳಿಕೆ (ಇಪಿಎಸ್)					
ಎ. ಮೂಲ ಮತ್ತು ದುರ್ಬಲ	0.08	(0.01)	(0.10)	0.02	0.02

ಟಿಪ್ಪಣಿ:
1. ಮೇಲ್ಕಂಡ ಪರಿಶೋಧಿತ ಫಲಿತಾಂಶವನ್ನು ಲೆಕ್ಕಪತ್ರ ಸಮಿತಿ ಪರಾಮರ್ಶಿಸಿದೆ ಮತ್ತು ಆಡಳಿತ ಮಂಡಳಿ 29.05.2026ರಂದು ನಡೆದ ತಮ್ಮ ಸಭೆಯಲ್ಲಿ ಅನುಮೋದಿಸಿದೆ.
2. ಹಿಂದಿನ ತ್ರೈಮಾಸಿಕದ ಅಂಕಿ-ಅಂಶಗಳನ್ನು ಪ್ರಸಕ್ತ ಅವಧಿಯ ವರ್ಗೀಕರಣವನ್ನು ದೃಢೀಕರಿಸಲು ಅಗತ್ಯವೆನಿಸಿದಲ್ಲಿ ಮರು ಗುಂಪು ಮಾಡಲಾಗಿದೆ ಮತ್ತು ಮರು ವರ್ಗೀಕರಿಸಲಾಗಿದೆ.
3. 2026ರ ಮಾರ್ಚ್ 31 ಮತ್ತು 2025ರ ಮಾರ್ಚ್ 31ರಂದು ಕೊನೆಗೊಂಡ ತ್ರೈಮಾಸಿಕಗಳ ಅಂಕಿ-ಅಂಶಗಳು ಇಡೀ ಹಣಕಾಸು ವರ್ಷಕ್ಕೆ ಸಂಬಂಧಿಸಿದ ಪರಿಶೋಧಿತ ಅಂಕಿ-ಅಂಶಗಳು ಮತ್ತು ಪ್ರಸ್ತುತ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದ ವರೆಗಿನ ಹಿಂದಿನ ವರ್ಷದ ದಿನಾಂಕಕ್ಕೆ ಇದ್ದ ಅಂಕಿ-ಅಂಶಗಳ ಸಮತೋಲಿತ ಅಂಕಿ-ಅಂಶಗಳಾಗಿವೆ.

ಓಟಿಸಿಓ ಇಂಟರ್‌ನ್ಯಾಷನಲ್ ಲಿಮಿಟೆಡ್ ಪರವಾಗಿ
ಸಹಿ/- ಭಾಗ್ಯಲಕ್ಷ್ಮಿ ತಿರುಮಲೈ, ಪೂರ್ಣಾವಧಿ ನಿರ್ದೇಶಕರು
ಡಿಐಎನ್ :08186335

ಸ್ಥಳ: ಚೆನ್ನೈ
ದಿನಾಂಕ : 29.05.2026

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜನೀಯರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ದಂಡಾವತಿ ಜಲಾಶಯ ಯೋಜನಾ ವಿಭಾಗ, ಶಿಕಾರಿಪುರ

ಅಲ್ಪಾವಧಿ_ಟೆಂಡರ್ ನೋಟಿಫಿಕೇಶನ್: 08/2026-27 ದಿನಾಂಕ:25.05.2026 (3ನೇ ಕರೆ)
ಉಲ್ಲೇಖ:1.ಅಲ್ಪಾವಧಿ ಟೆಂಡರ್ ನೋಟಿಫಿಕೇಶನ್: 31/2025-26 ದಿನಾಂಕ:23.01.2026
2.ಅಲ್ಪಾವಧಿ ಟೆಂಡರ್ ನೋಟಿಫಿಕೇಶನ್: 41/2025-26 ದಿನಾಂಕ:05.03.2026 (2ನೇ ಕರೆ)
(ದ್ವಿ ಟೆಂಡರ್ ದಾಖಲೆ & ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜನೀಯರರು, ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ ಶಿಕಾರಿಪುರ ಇವರಿಂದ **KPWD Class-I/CPWD Class-1 & Above registration** ದರ್ಜೆಯ ಗುತ್ತಿಗೆದಾರರಿಂದ ಕೆ.ಪಿ.ಪಿ-ಪ್ರಕ್ಯೂರ್‌ಮೆಂಟ್ ಮೂಲಕ ದ್ವಿ ಟೆಂಡರ್ ದಾಖಲೆ ಪದ್ಧತಿಯಡಿ ಟೆಂಡರ್ ಆಹ್ವಾನಿಸಲಾಗಿದೆ.

"CONSTRUCTION OF BARRAGE / BRIDGE CUM BARRAGE IN SELECTED REACHES OF VARADA AND DANDAVATHI RIVER IN SORABA TALUK OF SHIVAMOGGA DISTRICT". (INDENT No:3900) ಕಾಮಗಾರಿಯ ಟೆಂಡರಿಗಿಟ್ಟ ಮೊತ್ತ ರೂ. 36.76 ಕೋಟಿಗಳು & ಇ.ಎಂ.ಡಿ ಮೊತ್ತ ರೂ. 0.32 ಕೋಟಿಗಳು.

1) ಟೆಂಡರ್‌ನಲ್ಲಿ ಭಾಗವಹಿಸಬಹುದಾದ ದಿನಾಂಕ: 27-05-2026 ರಿಂದ 25-06-2026 ಸಂಜೆ 5.00 ರವರೆಗೆ, 2) ಪ್ರೀಬಿಡ್ ಸಭೆಯ ದಿನಾಂಕ: 10.06.2026 ಬೆಳಗ್ಗೆ 11.00 ಗಂಟೆಗೆ (ಸ್ಥಳ :ಮುಖ್ಯ ಇಂಜನೀಯರವರ ಕಛೇರಿ, ಕನೀನಿನಿ, ತುಂಗಾ ಮೇಲ್ದಂಡೆ ಯೋಜನಾ ವಲಯ ಶಿವಮೊಗ್ಗ 3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 29.06.2026 ಬೆಳಗ್ಗೆ 11.00 ಗಂಟೆಗೆ 4)ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಆರ್ಥಿಕ ಬಿಡ್ ತೆರೆಯಲಾಗುವುದು.

ಹೆಚ್ಚಿನ ಮಾಹಿತಿಗಾಗಿ **(www.kppp.karnataka.gov.in)** ಅಥವಾ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಸಂಪರ್ಕಿಸಬಹುದು.

ವಾ.ಸಾ.ಸಂ.ಇ/ಶಿ/ನಂ.129-05/ಥೀಂಕಾರ್/2026-27
ಸಹಿ/- ಕಾರ್ಯಪಾಲಕ ಇಂಜನೀಯರರು, ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ ಶಿಕಾರಿಪುರ.

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ಚಿತ್ರದುರ್ಗ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ.

ಇ-ಮೇಲ್:zped.cta@gmail.com ದೂರವಾಣಿ ಸಂ:08194-222372
ಸಂ:ಪಂರಾಜ್‌ಇಂವಿ/ಚಿದು/ಇಇ/ಟೆಂಡರ್/2026-27/468
ದಿನಾಂಕ: 29-05-2026

Corrigendum

ದಿನಾಂಕ ಮುಂದೂಡಿಕೆ ಪ್ರಕಟಣೆ
e-procurement ಮೂಲಕ ಮಾತ್ರ

ಕರ್ನಾಟಕ ರಾಜ್ಯದ ರಾಜ್ಯಪಾಲ ಪರವಾಗಿ ಚಿತ್ರದುರ್ಗ ಜಿಲ್ಲೆಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ವ್ಯಾಪ್ತಿಯು ಕೆ.ಎಂ.ಇ.ಆರ್.ಸಿ. ಯೋಜನೆಯಡಿ ಅನುಮೋದನೆಯಾಗಿರುವ ಈ ಕೆಳಕಂಡ 4-ಕಾಮಗಾರಿಗಳ ಇಂಡೆಂಟ್ ಸಂ: (Indent No:RDPR/2025-26/BD/WORK_INDENT20501,RDPR/2025-26/BD/WORK_ INDENT24347,RDPR/2025-26/BD/WORK_INDENT25351,RDPR/2025-26/BD/WORK_ INDENT25353). ಸದರಿ ಕಾಮಗಾರಿಗಳ ಅಂದಾಜು ಮೊತ್ತ ಕನಿಷ್ಠ ರೂ: 728.71 ಲಕ್ಷ ಹಾಗೂ ಗರಿಷ್ಠ ರೂ: 1171.39 ಒಟ್ಟು ರೂ: 3790.23 ಲಕ್ಷಗಳಿಗೆ ಟೆಂಡರ್ ಪ್ರಕಟಣೆಯನ್ನು ಈಗಾಗಲೇ ಟೆಂಡರ್ ಕರೆಯಲಾಗಿತ್ತು. ತಾಂತ್ರಿಕ ಕಾರಣಗಳಿಂದ ಟೆಂಡರ್ ಪ್ರಕ್ರಿಯೆ ದಿನಾಂಕಗಳನ್ನು ಮುಂದೂಡಲಾಗಿದೆ. ಗುತ್ತಿಗೆದಾರರು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಾಗಿ (https://kppp.karnataka. gov.in/ or E-Proc Help desk Phone No: 09240214000 & 09240214001) ಸಂಪರ್ಕಿಸಲು ಅಥವಾ ದೂರವಾಣಿ ಸಂಖ್ಯೆ: 08194-222372 ಕಾರ್ಯಪಾಲಕ ಅಭಿಯಂತರರು, ಪಂ.ರಾಜ್.ಇಂ.ವಿಭಾಗ, ಚಿತ್ರದುರ್ಗ ರವರನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ. ವಿವರಗಳು ಈ ಕೆಳಕಂಡಂತಿವೆ:-

ಪ್ರಸ್ತುತ ದಿನಾಂಕ
ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ: 30.05.2026ರ : ಸಮಯ: 11.01
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 01.06.2026ರ : ಸಮಯ 16.00
ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 02.06.2026ರ : ಸಮಯ 16.01
ಆರ್ಥಿಕ ಬಿಡ್ ತೆರೆಯುವ ದಿನಾಂಕ: 03.06.2026ರ : ಸಮಯ 16.02

ಮುಂದೂಡಿದ ದಿನಾಂಕ
ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ: 04.06.2026ರ : ಸಮಯ: 11.00
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 05.06.2026ರ : ಸಮಯ 16.00
ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 06.06.2026ರ : ಸಮಯ 16.01
ಆರ್ಥಿಕ ಬಿಡ್ ತೆರೆಯುವ ದಿನಾಂಕ: 08.06.2026ರ : ಸಮಯ 16.02

RO.No.132:DIPR/CTA/KSMCA/2026-27
ಸಹಿ/- ಕಾರ್ಯಪಾಲಕ ಅಭಿಯಂತರರು, ಪಂ.ರಾಜ್ ಇಂ.ವಿಭಾಗ, ಚಿತ್ರದುರ್ಗ

Edelweiss | ECL Finance Ltd.
Ideas create, values protect

ಶಾಖೆ ಸ್ಥಳಾಂತರ ಸೂಚನೆ

ಶಾಖೆ ಸ್ಥಳಾಂತರಕ್ಕೆ ಸಂಬಂಧಿಸಿದಂತೆ ಈ ಮೂಲಕ ಸೂಚನೆ ನೀಡಲಾಗುತ್ತದೆ. ನಾವು, ಇಸಿಎಲ್ ಫೈನಾನ್ಸ್ ಲಿಮಿಟೆಡ್, ನಮ್ಮ ಸಾರ್ವಜನಿಕರು ಮತ್ತು ಗ್ರಾಹಕರಿಗೆ ತಿಳಿಸಲು ಬಯಸುವುದೇನೆಂದರೆ, ನಾವು ನಮ್ಮ ಬೆಂಗಳೂರು ಶಾಖೆಯನ್ನು 12ನೇ ಸೆಪ್ಟೆಂಬರ್ 2026ರಿಂದ ಸ್ಥಳಾಂತರ ಮಾಡುತ್ತಿದ್ದೇವೆ.

ನೋಂದಾಯಿತ ಕಚೇರಿ:
ಇಸಿಎಲ್ ಫೈನಾನ್ಸ್ ಲಿಮಿಟೆಡ್, ಟವರ್ 3, ವಿಂಗ್, ಕೊಹಿನೂರ್ ಸಿಟಿ, ಕೊಹಿನೂರ್ ಸಿಟಿ ಕಿರೋಲ್ ರಸ್ತೆ, ಕುರ್ಲಾ (ಪಶ್ಚಿಮ), ಮುಂಬೈ - 400070

ಪ್ರಸ್ತುತ ವಿಳಾಸ:
1ನೇ ಮಹಡಿ, 'ಎನ್‌ಪಿಆರ್ ಚೇಂಬರ್', ಸಂ. 746, 80 ಫೀಟ್ ರಸ್ತೆ, ಕೋರ್ಮಂಗಲಾ 4ನೇ ಬ್ಲಾಕ್, ಬೆಂಗಳೂರು - 560034

ಹೊಸ / ಸ್ಥಳಾಂತರಿತ ವಿಳಾಸ:
1ನೇ ಮಹಡಿ, 'ಸಾಯಿ ಸುವರ್ಣ ಆರ್ಕೇಡ್', ಸಂ. 1-10/A, 2ನೇ ಮೇನ್ ರಸ್ತೆ, 27ನೇ ಕ್ರಾಸ್, 7ನೇ ಬ್ಲಾಕ್, ಜಯನಗರ, ಬೆಂಗಳೂರು - 560082
ಇಮೇಲ್: assistance@eclf.com
ಕಾಲ್ ಸೆಂಟರ್: 1-800-1026372
(ಸೋಮವಾರ - ಶುಕ್ರವಾರ, ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ)